ದೃಷ್ಟಿ ಮಂದ ಮತ್ತು ದೃಷ್ಟಿ ಹೀನ ಮಗುವಿಗಾಗಿ

# ಪ್ರಪಂಚವನ್ನು ಅರಿಯಲು ನನಗೆ ನೆರವಾಗಿ

## ಪ್ರಪಂಚದ ಬಗ್ಗೆ ಆಸಕ್ತಿ ಉಂಟು ಮಾಡಿಸಿ



ಪ್ರಪಂಚದ ತುಂಬಾ ಅನೇಕ ಅವಕಾಶಗಳಿವೆಯಂತೆ. ಇದನ್ನು ತಿಳಿದುಕೊಳ್ಳಲು ನೀವು ಸಹಾಯ ಮಾಡದಿದ್ದರೆ ನನಗೆ ಗೊತ್ತಾಗುವುದು ಹೇಗೆ? ನೀವು ತೋರಿಸುವವರೆಗೂ ನನ್ನ ಸುತ್ತ ಮುತ್ತ ಏನೇನಿದೆ ಎಂದು ನನಗೆ ತಿಳಿಯುವುದೇ ಇಲ್ಲ. ನನಗೆ ಕೇಳಿಸುವ ಶಬ್ದಗಳ ಬಗ್ಗೆ ಮತ್ತು ನೀವು ನೋಡುತ್ತಿರುವ ವಿಷಯಗಳ ಬಗ್ಗೆ ನನ್ನ ಬಳಿ ಮಾತನಾಡಿ. ನನ್ನ ಕೈ ಹಿಡಿದು ಸಾಮಾನುಗಳನ್ನು ಸ್ಪರ್ಶಿಸಲು ಸಹಾಯಮಾಡಿ. ನಾನು ಭಯಪಟ್ಟರೆ ನಿಮ್ಮ ಕೈ ಹಿಡಿದು ನೀವು ಮುಟ್ಟುತ್ತಿರುವುದನ್ನು ಅನುಭವಿಸಲು ನೆರವು ಮಾಡಿಕೊಡಿ. ಬಲವಂತವಾಗಿ ನನ್ನ ಕೈ ಹಿಡಿದು ಎಳೆಯಬೇಡಿ. ಹಾಗೆ ಮಾಡಿದರೆ ವಸ್ತುಗಳನ್ನು ಸ್ಪರ್ಶಿಸುವ ಆಸೆಯನ್ನೇ ನಾನು ಕಳೆದುಕೊಳ್ಳಬಹುದು.

## ಶೋಧನೆ ಹೇಗೆ ಎಂದು ತಿಳಿಯ ಪಡಿಸಿ



ಪದಾರ್ಥಗಳು ಎಲ್ಲಿಂದ ಬರುತ್ತವೆ? ಅವುಗಳನ್ನು ಅಪಾಯವಿಲ್ಲದಂತೆ ತೆಗೆದುಕೊಳ್ಳುವುದು ಹೇಗೆ? ಅವುಗಳಿಂದ ನಾನು ಏನೇನು ಮಾಡಲು ಸಾಧ್ಯ? ಸಾಮಾನುಗಳ ಜೊತೆ ಆಟ ಆಡುವುದು ಹೇಗೆ ಎಂದೆಲ್ಲವನ್ನೂ ಕಲಿಸಿಕೊಡಿ. ತೆಗೆದುಕೊಂಡ ವಸ್ತುಗಳನ್ನು ಆಯಾ ಸ್ಥಾನಗಳಲ್ಲೇ ಇಟ್ಟರೆ ಪುನಃ ಬೇಕಾದಾಗ ತೆಗೆದುಕೊಳ್ಳಲು ನನಗೆ ಅನುಕೂಲವಾಗುವುದು. ನನಗೆ ಕಾಣಿಸದೇ ಇರುವುದರಿಂದ ಏನಾಗುವುದು, ಎಂತಾಗುವುದು ಎಂಬುದನ್ನು ನೀವು ವಿವರವಾಗಿ ಹೇಳದಿದ್ದರೆ ನನಗೆ ಒಂದೂ ಅರ್ಥವೇ ಆಗುವುದಿಲ್ಲ. ಆಟಿಕೆಯನ್ನು ಸುಮ್ಮನೆ ನನ್ನ ಕೈಯಲ್ಲಿ ಕೊಡಬೇಡಿ. ಅದನ್ನು ಎಲ್ಲಿಟ್ಟಿರುವಿರಿ, ಹೇಗೆ ಅದರ ಬಳಿಗೆ ಹೋಗಿ ತೆಗೆದುಕೊಳ್ಳಬೇಕು, ಆಟಿಕೆಯೊಡನೆ ಆಡುವುದೆಂತು ಎಂಬ ಎಲ್ಲಾ ವಿವರವನ್ನೂ ಬಿಡಿಸಿ ಬಿಡಿಸಿ ತಿಳಿಸಿ. ಆಗ ನಾನೇ ಸ್ವಂತವಾಗಿ ಮಾಡುವುದನ್ನು ಕಲಿತುಕೊಳ್ಳುವೆನು.



## ನಾನು ಸ್ವತಂತ್ರವಾಗಿರಲು ನೆರವು ನೀಡಿ

ಕೆಲಸಗಳನ್ನು ಮಾಡುವುದು ಹೇಗೆ ಎಂದು ಹೇಳಿಕೊಡಿ ಮತ್ತು ನಾನೇ ಖುದ್ದಾಗಿ ಮಾಡಲು ಉತ್ತೇಜನ ಕೊಡಿ. ಸ್ಪಷ್ಟವಾದ, ಸರಳ ಮಾರ್ಗವನ್ನು ಅನುಸರಿಸಿದರೆ ಕೆಲಸವನ್ನು ಕಲಿಯುವುದು ಸುಲಭ ಮತ್ತು ಶೀಘ್ರವಾಗಿಯೂ ಕಲಿಯ ಬಹುದು. ಅಲ್ಲದೆ ಪ್ರತಿ ಬಾರಿಯೂ ಒಂದೇ ರೀತಿಯಲ್ಲಿ ಮಾಡುತ್ತಿದ್ದರೆ ಕಲಿಯಲು ಹುಮ್ಮಸ್ಸಿರುವುದು. ನನ್ನ ನೆರವಿಗೆ ಧಾವಿಸ ಬೇಡಿ – ಆರಂಭಿಸುವ ಮೊದಲು ನಾನು ಬಹುಶಃ ಯೋಚಿಸುತ್ತಿರಬಹುದು ಅಷ್ಟೆ.

ನಾನು ಕಲಿತಂತೆಲ್ಲಾ ನಿಮ್ಮ ನೆರವನ್ನು ಕಡಿಮೆ ಮಾಡಿ. ಒಂದು ದಿನ ನಾನೂ ಸ್ವತಂತ್ರನಾಗುವೆ.

**ಮಕ್ಕಳ ಕಲಿಕೆಯಲ್ಲಿ ಭಿನ್ನತೆ**
**ಮಾಲಿಕೆಯ ಸಂಪಾದಕಿ: ನಮಿತ ಜೇಕಬ್**
**ಚೇತನ, ಚೆನ್ನೈ.**
**ಅನುವಾದ: ಸುಮತಿ ಪ್ರಭಾಕರ್**

**ಲೇಖಕಿ: ನಮಿತ ಜೇಕಬ್**
**ಚಿತ್ರ: ಹಿಸ್ಪಾರಿಯನ್ ಸಂಸ್ಥೆ**
**ಪ್ರಕಟಣೆ: ೨೦೦೬**
www.chetana.org.in




ದೃಷ್ಟಿ ಮಂದ ಮತ್ತು ದೃಷ್ಟಿ ಹೀನ ಮಗುವಿಗಾಗಿ

# ನಿಮ್ಮ ಮಗುವು ಸುಲಭವಾಗಿ ನೋಡಲು ಸಹಾಯ ಮಾಡಿ

ಮಗುವು ಬಳಸುತ್ತಿರುವ ವಸ್ತುಗಳಲ್ಲಿ ಅಥವಾ ಕೆಲಸ ಮಾಡುತ್ತಿರುವ ಪರಿಸರದಲ್ಲಿ ಸಣ್ಣ ಬದಲಾವಣೆಗಳನ್ನು ತರುವ ಮೂಲಕ ದೃಷ್ಟಿಯ ಪೂರ್ಣ ಉಪಯೋಗವನ್ನು ಪಡೆಯಲು ಉತ್ತೇಜಿಸಬಹುದು. ದಿನದಲ್ಲಿ ಮಾಡುವ ಎಲ್ಲಾ ಕೆಲಸಗಳಲ್ಲೂ ದೃಷ್ಟಿಯನ್ನು ಬಳಸಲು ನಿಮ್ಮ ಮಗುವನ್ನು ಪ್ರೋತ್ಸಾಹಿಸಿ. ದೈನಿಕ ಚಟುವಟಿಕೆಗಳಲ್ಲಿ ದೃಷ್ಟಿಯ ದಕ್ಷ ಬಳಕೆಯಿಂದ ಮಕ್ಕಳು **ದೃಷ್ಟಿಯ ನೈಪುಣ್ಯತೆ**ಯನ್ನು ಪಡೆಯುವರು. ಇದು **ದೃಷ್ಟಿಯ ತರಬೇತಿ**ಗಿಂತ ಉತ್ತಮವಾದುದು. ಹುಡುಗಿಗೆ ಮಣಿಯನ್ನು ಪೋಣಿಸಲು ಹೇಗೆ ಸಹಾಯ ಮಾಡಬಹುದೆಂದು ಈ ಕೆಳಗೆ ತಿಳಿಸಿದೆ.

## ವಸ್ತುಗಳಲ್ಲಿ ಪರಿವರ್ತನೆ

### ಸರಿಯಾದ ಗಾತ್ರದ ಆಯ್ಕೆ

ಕೆಲಸವನ್ನು ಮಾಡಬೇಕಾದರೆ ಮಗುವಿಗೆ ಕಾಣಿಸಬೇಕಾದ ವಸ್ತುಗಳು ಏನು ಎಂಬುದನ್ನು ಮೊದಲು ಆಲೋಚಿಸಿ. ಮಗುವು ಬಳಸಲಿರುವ ಎಲ್ಲಾ ವಸ್ತುಗಳ ಗಾತ್ರಗಳನ್ನು ಬದಲಾಯಿಸುವ ಅಗತ್ಯವಿರಲಾರದು. ಈ ಕೆಲಸದಲ್ಲಿ ನಾವು ಮಣಿಯ ಗಾತ್ರವನ್ನು ಹೆಚ್ಚಿಸಬಹುದು ಅಥವಾ ಮಣಿಯ ತೂತನ್ನು ಹಿಗ್ಗಿಸಬಹುದು. ದಪ್ಪ ದಾರವನ್ನು ಉಪಯೋಗಿಸಬಹುದು ಅಥವಾ ಕೇವಲ ದಾರದ ತುದಿಯನ್ನು ದಪ್ಪನಾಗಿಸಬಹುದು.

<u>ನೆನಪಿರಲಿ</u>! ಕೆಲವು ಮಕ್ಕಳು ಸಣ್ಣ ವಸ್ತುಗಳನ್ನು ಚೆನ್ನಾಗಿ ನೋಡಬಲ್ಲರು. ಆದ್ದರಿಂದ ವಸ್ತುಗಳ ಗಾತ್ರವನ್ನು ಹೆಚ್ಚಿಸುವುದರಿಂದ ಎಲ್ಲಾ ಮಕ್ಕಳಿಗೂ ಸಹಾಯವಾಗುವುದಿಲ್ಲ.

### ವ್ಯತಿರಿಕ್ತ ಮತ್ತು ತೀಕ್ಷ್ಣ ಬಣ್ಣಗಳ ಬಳಕೆ

ನಿಮ್ಮ ಮಗಳಿಗೆ ಯಾವ ರೀತಿಯ ತೊಂದರೆಯಾಗುತ್ತಿದೆ ಎಂಬುದನ್ನು ಗಮನಿಸಿ.

ಮಣಿಯನ್ನು ಹುಡುಕಲು ತೊಂದರೆಯೇ? ತೀಕ್ಷ್ಣ ಬಣ್ಣದ ಮಣಿಗಳನ್ನು ಕೊಡಿ ಅಥವಾ ವ್ಯತಿರಿಕ್ತ ಬಣ್ಣದ ಬಟ್ಟೆಯನ್ನು ನೆಲದ ಮೇಲಿಟ್ಟು ಅದರ ಮೇಲೆ ಮಣಿಗಳನ್ನಿಡಿ. ಇದರಿಂದ ಅವಳಿಗೆ ಹುಡುಕಲು ಸುಲಭವಾಗುವುದು.

ಮಣಿಯ ತೂತನ್ನು ಹುಡುಕಲು ತೊಂದರೆಯೇ? ಅಂತಾದಲ್ಲಿ ತೂತಿಗೆ ಬಣ್ಣ ಬಳಿಯಿರಿ ಮತ್ತು ಮಣಿಯ ರೂಪರೇಖೆಯನ್ನು ಮಣಿಯ ವ್ಯತಿರಿಕ್ತ ಬಣ್ಣದಿಂದ ಬರೆಯಿರಿ.

ದಾರವನ್ನು ತೂತಿನಲ್ಲಿ ತೂರಿಸಲು ತೊಂದರೆಯೇ? ಹಾಗಿದ್ದಲ್ಲಿ ದಾರದ ತುದಿಗೆ ತೀಕ್ಷ್ಣ ಬಣ್ಣ ಬಳಿಯಿರಿ. ಇದರಿಂದ ಅವಳಿಗೆ ದಾರದ ತುದಿ ಸುಲಭವಾಗಿ ಕಾಣಿಸುವುದು.



## ಪರಿಸರದಲ್ಲಿ ಬದಲಾವಣೆ

### ಬೆಳಕು

ಕೊಠಡಿ ಅಥವಾ ಕೆಲಸ ಮಾಡುವ ಜಾಗ ಅಥವಾ ಆಟ ಆಡುವ ಜಾಗದ ಬೆಳಕಿನಲ್ಲಿ ಬದಲಾವಣೆ ತಂದಾಗ ಕೆಲವು ಮಕ್ಕಳು ಚೆನ್ನಾಗಿ ನೋಡಬಲ್ಲರು. ವಿವಿಧ ಬೆಳಕನ್ನು ಬಳಸಲು ಪ್ರಯತ್ನಿಸಿ – ಸೂರ್ಯನ ಬೆಳಕು, ನಿಯಾನ್ ದೀಪ, ಪ್ರಜ್ವಲಿಸುವ ಹಳದಿ ದೀಪ ಮುಂತಾದುವು. ಕೆಲಸ ಮಾಡುವ ಸ್ಥಳದಲ್ಲಿ ಮಾತ್ರ ದೀಪವನ್ನು ಕೇಂದ್ರೀಕರಿಸಬೇಕೋ ಅಥವಾ ಕೊಠಡಿಯ ದೀಪವನ್ನು ಪ್ರಜ್ವಲಗೊಳಿಸಿದರೆ ಸಾಕೋ ಎಂಬುದನ್ನು ಗಮನಿಸಿ. ಮಗುವಿಗೆ ಮಾಲುಗಣ್ಣಿದೆಯೇ? ಬಹುಶಃ ಕಣ್ಣಿಗೆ ತುಂಬಾ ಬೆಳಕು ಪ್ರತಿಬಿಂಬಿಸುತ್ತಿರಬಹುದು. ನೆಲಕ್ಕೆ ಅಥವಾ ಮೇಜಿಗೆ ತೀಕ್ಷ್ಣ ಬಣ್ಣವನ್ನು ಬಳಸುವುದರಿಂದ ಸಹಾಯವಾಗಬಹುದು.

### ಮಗು ಮತ್ತು ವಸ್ತುಗಳ ಸ್ಥಾನ

ಮಗುವು ಬಗ್ಗಿ ಕೆಲಸ ಮಾಡುತ್ತಿದ್ದರೆ, ಸರಿಯಾಗಿ ನೋಡಲೆಂದು ತಲೆಯನ್ನು ತಿರುಗಿಸುತ್ತಿದ್ದರೆ ಅಥವಾ ಸಮತೋಲನವನ್ನು ಪಡೆಯಲು ಶ್ರಮಿಸುತ್ತಿದ್ದರೆ, ಆಗ ಬಹಳ ಕಾಲದವರೆಗೆ ತನ್ನ ದೃಷ್ಟಿಯ ಪೂರ್ಣ ಉಪಯೋಗವನ್ನು ಪಡೆಯಲು ಕಷ್ಟವಾಗುವುದು. ಮೇಜಿನ ಅಥವಾ ಕುರ್ಚಿಯ ಎತ್ತರ ಮತ್ತು ಕೋಣವನ್ನು ಬದಲಾಯಿಸಿ. ಇದರಿಂದ ಅವಳು ಅನಾಯಾಸವಾಗಿ ಕೆಲಸ ಮಾಡುವಳು ಮತ್ತು ಅವಳ ದೃಷ್ಟಿಯ ಬಳಕೆಯಲ್ಲಿ ಸುಧಾರಣೆಯನ್ನೂ ಕಾಣಬಹುದು.

### ಗಲಿಬಿಲಿ ಅಥವಾ ಗೊಂದಲ

ಒಮ್ಮೊಮ್ಮೆ ಕೆಲಸ ಮಾಡುವ ಜಾಗದಲ್ಲಿ ಅಥವಾ ಆಟವಾಡುವ ಜಾಗದಲ್ಲಿ ಅಗತ್ಯವಿದ್ದಷ್ಟು ಸಾಮಾನುಗಳನ್ನು ಇಡುವುದರಿಂದ ಅಥವಾ ಚಿತ್ರವಿಲ್ಲದ ಸಾದಾ ಚಾಪೆಯ ಮೇಲೆ ಸಾಮಾನುಗಳನ್ನು ಇಡುವುದರಿಂದ ಮಗುವು ತನಗೆ ಬೇಕಾದ ಸಾಮಾನುಗಳನ್ನು ಹುಡುಕಲು ಸಹಾಯವಾಗುವುದು.

## ಚಟುವಟಿಕೆಯಲ್ಲಿ ಬದಲಾವಣೆ

ನೆನಪಿಡಿ! ನಿಮ್ಮ ನೆರವಿಲ್ಲದೇ ಆಡಲು ಮತ್ತು ಕೆಲಸ ಮಾಡಲು ಮಗುವನ್ನು ಬಿಡುವುದು ಬಹಳ ಮುಖ್ಯ. ಸ್ಪರ್ಧಿಸುವ ಭಾವನೆಯನ್ನು ಬೆಳೆಸಿಕೊಳ್ಳುವಂತೆ ಮಾಡಲು ಸಮಯದ ಕಡಿವಾಣವಿಲ್ಲ.

ಕೆಲಸವು ತುಂಬಾ ಕಷ್ಟಕರವಾಗಿದ್ದಲ್ಲಿ, ಸ್ವಲ್ಪ ಬದಲಾಯಿಸಿ ಮಗುವು ತಾನಾಗಿ ಮಾಡಿ ಮುಗಿಸುವಂತೆ ನೆರವಾಗಿ. ಉದಾಹರಣೆಗೆ : ದಾರಕ್ಕೆ ಬದಲು ಬಾಗದ ತಂತಿಯನ್ನೋ ಅಥವಾ ಮರದ ಹಲಗೆಗೆ ಸಿಕ್ಕಿಸಿರುವ ಕೋಲನ್ನೋ ಕೊಟ್ಟು ಕೆಲಸವನ್ನು ಸುಲಭಗೊಳಿಸಿ ಮಣಿಯನ್ನು ಪೋಣಿಸುವುದನ್ನು ಹೇಳಿಕೊಡಿ. ಆರಂಭಿಸಿದ ಕೆಲಸವನ್ನು ಪೂರ್ಣಗೊಳಿಸುವಂತೆ ಪ್ರೋತ್ಸಾಹಿಸುವುದು ಬಹಳ ಮುಖ್ಯ.

**ಮಕ್ಕಳ ಕಲಿಕೆಯಲ್ಲಿ ಭಿನ್ನತೆ**
**ಮಾಲಿಕೆಯ ಸಂಪಾದಕಿ: ನಮಿತ ಜೇಕಬ್**
**ಚೇತನ, ಚೆನ್ನೈ.**
**ಅನುವಾದ: ಸುಮತಿ ಪ್ರಭಾಕರ್**

**ಲೇಖಕಿ: ನಮಿತ ಜೇಕಬ್**
**ಚಿತ್ರ: ಹಿಸ್ಪಾರಿಯನ್ ಸಂಸ್ಥೆ**
**ಪ್ರಕಟಣೆ: ೨೦೦೬**
www.chetana.org.in

ದೃಷ್ಟಿ ಮಂದ ಮತ್ತು ದೃಷ್ಟಿ ಹೀನ ಮಗುವಿಗಾಗಿ

# ಹೊಸ ವಿಷಯಗಳು ಮತ್ತು ಹೊಸ ಅನುಭವಗಳನ್ನು ಕಲಿಯಲು ನನಗೆ ನೆರವಾಗಿ

ನನ್ನ ಹಳೆಯ ಅನುಭವಗಳಲ್ಲಿ ಬಳಸಿದ ವಸ್ತುಗಳು ಮತ್ತು ಘಟನೆಗಳನ್ನು ಉಪಯೋಗಿಸಿಕೊಂಡು ಹೊಸ ಅನುಭವಗಳನ್ನು ಅರಿತುಕೊಳ್ಳಲು ಸಹಾಯಮಾಡಿ. ಹೊಸ ವಸ್ತು ಅಥವಾ ಘಟನೆಯು ಮೊದಲಿನಲ್ಲಿ ನನಗೆ ಭಯವನ್ನು ಉಂಟುಮಾಡಬಹುದು ಎಂಬುದನ್ನು ನೆನಪಿನಲ್ಲಿಡಿ. ನನ್ನನ್ನು ಪೀಡಿಸುತ್ತಿರುವುದು ಏನಿರಬಹುದು ಎಂದು ಊಹಿಸಿ ಮತ್ತು ಅದನ್ನು ಅರ್ಥಮಾಡಿಸಲು ಸಹಾಯ ಮಾಡಿ. ನನ್ನ ಕುಟುಂಬದವರು ನನಗೆ ಕಲಿಸಲು ಹೇಗೆ ನೆರವಾದರು ಎನ್ನುವುದನ್ನು ತಿಳಿಸುವೆನು.



ನಿನ್ನೆ ಸಂಜೆ ನನ್ನ ತಂದೆಯು ಮನೆಗೆ ಬಂದಾಗ ಹೊರಗಡೆ ಏನೋ ಒಂದು ಗುರುಗುಟ್ಟುವ ಅಪರಿಚಿತ ಶಬ್ದ ಕೇಳಿ ಬರುತ್ತಿತ್ತು. ಆ ಶಬ್ದದಿಂದ ನನಗೆ ಭಯವಾಗಿ, ದೂರದಲ್ಲಿ ಸುಮ್ಮನೆ ನಿಂತುಬಿಟ್ಟೆ. ಆದರೆ ನನ್ನ ಅಣ್ಣ ಮತ್ತು ಅಕ್ಕನಿಗೆ ತುಂಬಾ ಸಂತೋಷವಾಗಿತ್ತು. ಸಂಭ್ರಮದಿಂದ ಅಪ್ಪನು ಮೋಟಾರು ಬೈಸಿಕಲ್ಲನ್ನು ತಂದಿರುವ ವಿಷಯ ತಿಳಿಸಿದರು. ಅದೇನು ಇರಬಹುದು ಎಂಬುದು ತಿಳಿಯದೆ ಭಯವೆನಿಸಿ ನಾನು ಹತ್ತಿರ ಹೋಗಲು ಇಷ್ಟಪಡಲ್ಲಿಲ್ಲ.



ಆಗ ನನ್ನ ಅಣ್ಣ ಆ ಶಬ್ದವು ನಮ್ಮ ಮನೆಯಲ್ಲಿ ನೀರನ್ನು ಪಂಪ್ ಮಾಡುವ ಮೋಟಾರಿನ ಶಬ್ದದಂತೆಯೇ ಇದೆ ಎಂದು ವಿವರಿಸಿದನು. ನನ್ನ ಪಕ್ಕದಲ್ಲೇ ಕುಳಿತು ನಾನಾಗಿ ಭಯಬಿಟ್ಟು ಮೋಟಾರು ಬೈಸಿಕಲ್ಲನ್ನು ಮುಟ್ಟುವಂತೆ ಉತ್ತೇಜಿಸಿದನು. ನನಗೆ ಚಕ್ರಗಳನ್ನು ಮುಟ್ಟಲು ಹೇಳಿ ಕಾಲುಗಳನ್ನು ಇಡುವ ಜಾಗಗಳನ್ನೂ ತೋರಿಸಿಕೊಟ್ಟನು. ಆಗ ಅದೊಂದು ದೊಡ್ಡದಾದ, ದಪ್ಪಗಿರುವ ಬೈಸಿಕಲ್ಲಿನಂತೆಯೇ ಇದೆ ಎನಿಸಿ ನನ್ನ ಭಯವೆಲ್ಲಾ ಮಾಯವಾಯಿತು.



ನಂತರ ನನ್ನನ್ನು ಅದರ ಮೇಲೆ ಕೂರಿಸಿದರು. ನಾನು ಕುಳಿತಿರುವಂತೆಯೇ ಮೋಟಾರು ಬೈಸಿಕಲ್ಲನ್ನು ಸ್ಟಾರ್ಟ್ ಮಾಡಿ ಅದು ಹೇಗೆ ಶಬ್ದ ಮಾಡುವುದು ಮತ್ತು ಅದರ ಸ್ಪರ್ಶ ಹೇಗಿರುವುದು ಎಂಬುದೆಲ್ಲವನ್ನೂ ಅನುಭವಿಸಲು ನೆರವಾದರು. ಮೊದಲು ಸ್ವಲ್ಪ ಭಯ ಎನಿಸಿದರೂ ಆ ಅನುಭವ ಆನಂದಕರವಾಗಿಯೂ ಇತ್ತು. ಎಂಜಿನ್ ಗುರ್ರೆಂದು ಶಬ್ದ ಮಾಡಿದಾಗ ಮೋಟಾರು ಬೈಕಿನ ಅಲ್ಲಾಟದಿಂದ ನನ್ನ ದೇಹವೆಲ್ಲಾ ಅದುರಿ ಜುಂ ಎಂದಂತಾಯಿತು. ಸಂಜೆಯಾದಾಗ ನಾವು ಮೂವರೂ ಸೇರಿ ಮನೆಯ ಮುಂದೆ ಹೋಗುತ್ತಿದ್ದ ಮೋಟಾರು ಬೈಸಿಕಲ್ಲುಗಳ ಎಣಿಕೆ ಮಾಡಿದೆವು. ಅಪ್ಪ ಸ್ವಲ್ಪ ಸಮಯದ ನಂತರ ನಮ್ಮನ್ನೆಲ್ಲಾ ಒಬ್ಬೊಬ್ಬರಂತೆ ಬೈಕ್ ಮೇಲೆ ಕೂರಿಸಿಕೊಂಡು ಹೋಗುವುದಾಗಿ ಹೇಳಿದರು. ನನಗೇ ಮೊದಲು ಅಪ್ಪನ ಜೊತೆ ಹೋಗುವ ಅವಕಾಶ ಸಿಕ್ಕಿದರೆ.....!

ನೆನಪಿರಲಿ :

- ನನಗೆ ಕೇಳಿಸುವ ಶಬ್ದಗಳು ಮತ್ತು ಸ್ಪರ್ಶಿಸಿದ ವಸ್ತುಗಳು ಏನೆಂಬುದನ್ನು ಅರಿಯಲು ನೆರವಾಗಿ.
- ಹೊಸ ವಸ್ತುಗಳು ನನಗೆ ಈಗಾಗಲೇ ಗೊತ್ತಿರುವ ವಸ್ತುಗಳಿಂದ ಹೇಗೆ ಭಿನ್ನವಾಗಿವೆ ಎಂಬುದನ್ನು ವಿವರಿಸಿ.
- ಹೊಸದನ್ನು ಅನುಭವಿಸುವ ಮುಂಚೆ ನನಗೆ ಸ್ವಲ್ಪ ಸಮಯ ಹಿಡಿಯಬಹುದು, ತಾಳ್ಮೆಯಿಂದಿರಿ. ನಾನಾಗಿಕುತೂಹಲದಿಂದ ಕಲಿತರೆ ಚೆನ್ನಾಗಿ ಕಲಿಯುವ ಸಾಧ್ಯತೆ ಇದೆ – ಆದ್ದರಿಂದ ಬಲವಂತ ಮಾಡಬೇಡಿ.

**ಮಕ್ಕಳ ಕಲಿಕೆಯಲ್ಲಿ ಭಿನ್ನತೆ**
**ಮಾಲಿಕೆಯ ಸಂಪಾದಕಿ: ನಮಿತ ಜೇಕಬ್**
**ಚೇತನ, ಚೆನ್ನೈ.**
**ಅನುವಾದ: ಸುಮತಿ ಪ್ರಭಾಕರ್**

**ಲೇಖಕಿ: ನಮಿತ ಜೇಕಬ್**
**ಚಿತ್ರ: ಹಿಸ್ಪಾರಿಯನ್ ಸಂಸ್ಥೆ**
**ಪ್ರಕಟಣೆ: ೨೦೦೬**
www.chetana.org.in

ದೃಷ್ಟಿ ಮಂದ ಮತ್ತು ದೃಷ್ಟಿ ಹೀನ ಮಗುವಿಗಾಗಿ

# ಆತ್ಮ ವಿಶ್ವಾಸದಿಂದ ಕಲಿಯಲು ನನಗೆ ನೆರವು

ದೃಷ್ಟಿಯ ನ್ಯೂನತೆಯುಳ್ಳ ಅನೇಕ ಮಕ್ಕಳು ಅನಾಸಕ್ತಿಯಿಂದ ಮಲಗಿದ್ದಲ್ಲೇ ಮಲಗಿರುವುವು. ತಮ್ಮ ಸುತ್ತಮುತ್ತ ಏನಿರುವುದೆಂಬುದನ್ನು ಹುಡುಕುವುದಾಗಲೀ, ಚಲಿಸುವುದಾಗಲೀ ಮಾಡುವ ಉತ್ಸಾಹವೇ ಇರುವುದಿಲ್ಲ. ಅನ್ವೇಷಣೆ ಮತ್ತು ಚಲನೆಯಿಂದಲೇ ಈ ವಯಸ್ಸಿನ ಮಕ್ಕಳ ಬೆಳವಣಿಗೆಗೆ ಮತ್ತು ಕಲಿಕೆಗೆ ದಾರಿ. ತಾವು ಸುರಕ್ಷಿತರಾಗಿರುವೆವೆಂಬ ಭಾವನೆಯನ್ನು ಬೆಳೆಸಿಕೊಳ್ಳಲು ನೆರವಾದಲ್ಲಿ ತಮ್ಮ ಸುತ್ತಲಿನ ಪರಿಸರಕ್ಕೆ ಹತ್ತಿರವಾಗಲು ಸಹಾಯವಾಗುವುದು. ವಿಧ ವಿಧವಾದ ಭಂಗಿಗಳು, ಸ್ಥಾನಗಳು, ಸನ್ನಿವೇಶಗಳನ್ನು ಕಲ್ಪಿಸುವುದರಿಂದ ಅವರ ಆಸಕ್ತಿ ಮತ್ತು ಚಟುವಟಿಕೆಗಳನ್ನು ಹೆಚ್ಚುಗೊಳಿಸಲು ನೆರವಾಗುವುದು.



## ಸೀಮಾ ರೇಖೆಯನ್ನು ಸೃಷ್ಟಿಸುವುದು

ಕಣ್ಣು ಚೆನ್ನಾಗಿ ಕಾಣಿಸದ ಮಗುವಿಗೆ ತಾನು ಎಲ್ಲಿ, ಹೇಗೆ, ಎಷ್ಟು ಚಲಿಸಬಹುದು ಎಂಬುದರ ಅರಿವಿರುವುದಿಲ್ಲ. ಬೀಳದಂತೆ, ಘಾಯಗೊಳ್ಳದಂತೆ ಅಥವಾ ಅಪಾಯಕರ ವಸ್ತುವನ್ನು ಮುಟ್ಟಿ ಭಯಗೊಳ್ಳದಂತೆ ಚಲಿಸುವ ರೀತಿಯನ್ನು ಅನುಸರಿಸುವುದು ಮಗುವಿಗೆ ತುಂಬಾ ಕಷ್ಟ. ಇಂತಹ ಪರಿಸ್ಥಿತಿಯಲ್ಲಿ ಕಾಣಿಸುವಂತಹ ಅಥವಾ ಮುಟ್ಟಿ ನೋಡಿ ತಿಳಿದುಕೊಳ್ಳುವಂತಹ **ಸೀಮಾ ರೇಖೆಯನ್ನು** ಸೃಷ್ಟಿಸುವುದೇ ಮಗುವಿಗೆ ತನ್ನ **ಸುರಕ್ಷಿತ ಸ್ಥಾನ**ದ ಅರಿವುಮಾಡಿ ಕೊಡುವುದರ ಮೊದಲ ಹಂತ. ಕೆಲವು ಮಕ್ಕಳಿಗೆ ಚಾಪೆಯ ಮೇಲೆ ವಿಭಿನ್ನವಾದ ಬಣ್ಣದ ಗೆರೆಯಿಂದ ಎಲ್ಲೆಯ ರೇಖೆ ಎಳೆದರೆ ಸಾಕು. ಇನ್ನು ಕೆಲವರಿಗೆ ಮುಟ್ಟಿ ತಿಳಿಯುವಂತಹ ಸೀಮಾ ರೇಖೆಯನ್ನು ಮಾಡಬೇಕು. ಸುರಕ್ಷತೆಗಾಗಿ ತಮ್ಮ ದೇಹದ ಒಂದು ಭಾಗವನ್ನು ಒತ್ತಿಗೆ ಇಡುವಂತಹ ಏನಾದರೂ ಸಾಮಾನು ಕೊಟ್ಟರೂ ಸಾಕು. ಭಯಭೀತರಾದ ಮತ್ತು ಅನಾಸಕ್ತಿಯುಳ್ಳ ಮಕ್ಕಳಿಗೆ ಯಾವಾಗಲೂ **ಸೀಮಾ ರೇಖೆ**ಯನ್ನು ಉಪಯೋಗಿಸಿದರೆ ಒಳ್ಳೆಯದು – ಮಗುವು ನಿಮ್ಮ ತೊಡೆಯ ಮೇಲಿರುವಾಗಲೂ ನಿಮ್ಮ ದೇಹವನ್ನೇ ಎಲ್ಲೆಯಾಗಿ ಬಳಸಿ – ಮಕ್ಕಳು ತಾವಾಗಿ ಸೀಮಾ ರೇಖೆಯನ್ನು ನಿರ್ಲಕ್ಷಿಸಿ ಮುನ್ನುಗ್ಗಿ ಪರಿಶೀಲಿಸಲು ಆಸಕ್ತಿಯನ್ನು ಬೆಳೆಸಿಕೊಳ್ಳುವವರೆಗೂ ಎಲ್ಲೆ ಇರಲಿ.





## ಪ್ರಪಂಚದ ಪರಿಚಯ

ಸ್ಪರ್ಶಿಸುವುದು ಮತ್ತು ಸಂಶೋಧಿಸುವುದರಿಂದ ಮಗುವಿಗೆ ತನ್ನ ದೇಹ ಮತ್ತು ಮಿಕ್ಕ ಪ್ರಪಂಚದ ಮಧ್ಯೆ ಇರುವ ವ್ಯತ್ಯಾಸದ ಅರಿವಾಗುವುದು. ಯಾವಾಗಲೂ ಕುತೂಹಲಕಾರಿಯಾದ ಶಬ್ದಗಳು, ವಾಸನೆ, ಸ್ಪರ್ಶ ಅಥವಾ ನೋಟವು ಮಗುವಿನ ಬಳಿ ಇರಲಿ. ಬೇಕೆನಿಸಿದಾಗ ಮುಟ್ಟಿ ಅನುಭವಿಸುವ ಅವಕಾಶವಿರಲಿ. ಮಗುವು ಮುಟ್ಟಲು ಪ್ರಯತ್ನಿಸಿದಾಗ ವಸ್ತುಗಳು ಆ ಜಾಗದಿಂದ ಕದಲಿದರೆ ಅಥವಾ ಉರುಳಿ ಹೋದರೆ ಮಗುವಿಗೆ ಗೊಂದಲ ಉಂಟಾಗುವುದು. ಆದ್ದರಿಂದ ವಸ್ತುಗಳಿಗೆ ದಾರವನ್ನು ಕಟ್ಟಿಯೋ ಅಥವಾ ಹತ್ತಿರದಲ್ಲಿರುವ ಪದಾರ್ಥಗಳಿಗೆ ಸೇರಿಸಿ ಹೊಲಿಯುವ ಮೂಲಕ ಉರುಳಿ ಹೋಗದಂತೆ ಮಾಡಬೇಕು. ನಿಮ್ಮ ಮುಖ, ಕೈಗಳು, ಬಟ್ಟೆ ಮುಂತಾದವೂ ಸಹ ನಿಮ್ಮ ಮಗುವಿಗೆ ಸಂಶೋಧನಾ ಸಾಮಗ್ರಿ ಎಂಬುದನ್ನು ಮರೆಯಬೇಡಿ.







## ವಿವಿಧ ಸ್ಥಾನಗಳ ಬಗ್ಗೆ ಪ್ರೋತ್ಸಾಹನೆ

ಬೇರೆ ಬೇರೆ ಜಾಗಗಳಲ್ಲಿ ಆಡುವಾಗ ನಮ್ಮ ದೇಹದ ಭಾಗಗಳನ್ನು ಸರಿತೂಗಿಸುತ್ತಾ, ವಿವಿಧ ರೀತಿಯಲ್ಲಿ ಬಳಸಿಕೊಂಡು ವಸ್ತುಗಳನ್ನು ಮುಟ್ಟಲು ಪ್ರಯತ್ನಿಸುವೆವಾದ್ದರಿಂದ ದೇಹದ ಭಾಗಗಳ ಬಗ್ಗೆ ಚೆನ್ನಾಗಿ ಅರ್ಥವಾಗುವುದು. ಅತಿ ಚಿಕ್ಕ ಮಗುವಿಗೆ ಮೊತ್ತ ಮೊದಲ ಅನ್ವೇಶಣೆಯು ತನ್ನದೇ ಆದ ದೇಹ. ಆದ್ದರಿಂದ ಬೇರೆ ಬೇರೆ ಸ್ಥಾನಗಳಲ್ಲಿ ಅನುಭವ ಹೊಂದುವಂತೆ ಅನುವು ಮಾಡಿಕೊಡಲು ನಿಮ್ಮ ದೈನಂದಿನ ಕಾರ್ಯಗಳ ನೆರವು ಪಡೆಯ ಬೇಕು.





ಮಕ್ಕಳ ಕಲಿಕೆಯಲ್ಲಿ ಭಿನ್ನತೆ
ಮಾಲಿಕೆಯ ಸಂಪಾದಕಿ: ನಮಿತ ಜೇಕಬ್
ಚೇತನ, ಚೆನ್ನೈ.
ಅನುವಾದ: ಸುಮತಿ ಪ್ರಭಾಕರ್

ಲೇಖಕಿ: ನಮಿತ ಜೇಕಬ್
ಚಿತ್ರ: ಹಿಸ್ಪಾರಿಯನ್ ಸಂಸ್ಥೆ
ಪ್ರಕಟಣೆ: ೨೦೦೬
www.chetana.org.in